
# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ


ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಭಾರತದ ನೌಕಾಪಡೆಯ ಜಲಾಂತರ್ಗಾಮಿ ವಿರೋಧಿ ಯುದ್ಧ ಸಾಮರ್ಥ್ಯ ಹೆಚ್ಚಿಸುವಲ್ಲಿ ಸಹಕರಿಸುವ ದೀರ್ಘವ್ಯಾಪ್ತಿಯ ಅಸಿಸ್ಟಡ್ ಟಾರ್ಪಿಡೋ (ಸ್ಮಾರ್ಟ್) ಕ್ಷಿಪಣೆಯನ್ನು ಒಡಿಶಾದ ಬಾಲಾಸೋರ್ ನಿಂದ ಯಶಸ್ವಿಯಾಗಿ ಪರೀಕ್ಷಿಸಿದೆ.




ಸಂಪುಟ : 46 | ಸಂಚಿಕೆ : 02 | ಚೈತ್ರ – ವೈಶಾಖ | ಕಲಿಯುಗಾಬ್ದ 5126 | 15–05–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ತೆರಿಗೆಯತ್ತ ಸೈದ್ಧಾಂತಿಕ ನೋಟ

■ ಡಾ॥ ಎಂ.ಕೆ. ಶ್ರೀಧರನ್



ಸರ್ಕಾರದ ವ್ಯವಸ್ಥೆಯ ಬಗ್ಗೆ ಕುತೂಹಲಕರವಾದ ಒಂದು ಪ್ರಾಚೀನ ವಿವರಣೆ ಇದೆ. "ರಾಜನಿರಲಿಲ್ಲ, ರಾಜ್ಯವಿರಲಿಲ್ಲ, ದಂಡಿಸುವವರೂ, ದಂಡನೆಗೆ ಒಳಗಾಗುವರೂ ಇರಲಿಲ್ಲ. ಪ್ರಜೆಗಳು ಪರಸ್ಪರ ಧರ್ಮದ ಆಚರಣೆಯಿಂದ ರಕ್ಷಿಸಿಕೊಳ್ಳುತ್ತಿದ್ದರು" ಎನ್ನುವ ಚಿಂತನೆ ಎಲ್ಲಾ ಕಾಲಗಳ, ಎಲ್ಲಾ ಸಮಾಜಗಳಿಗೂ ಮಾದರಿಯಾಗಿದೆ. ಸಾಮಾಜಿಕ ವ್ಯವಸ್ಥೆಯ ದೀರ್ಘ ಇತಿಹಾಸವನ್ನು ಗಮನಿಸಿದಾಗ, ಸರ್ಕಾರದ ಅಗತ್ಯ ಇರುವಂತೆ ಕಾಣುವುದಷ್ಟೇ ಅಲ್ಲದೇ ಅದರ ಅನಿವಾರ್ಯತೆಯ ಅರಿವೂ ಉಂಟಾಗುತ್ತದೆ. ಸರ್ಕಾರದ ಅಸ್ತಿತ್ವ ಮತ್ತು ಕಾರ್ಯನಿರ್ವಹಣೆಗೆ ಸಂಪನ್ಮೂಲಗಳು ಬೇಕು. ಈ ಸಂಪನ್ಮೂಲಗಳನ್ನು ಜನರಿಂದ ಸಂಗ್ರಹಿಸುವ ತೆರಿಗೆಗಳಿಂದ ಪಡೆದುಕೊಳ್ಳುವ ವಿಧಾನವೂ ಸಹ ಪ್ರಾಚೀನವೂ, ಪರ್ಯಾಯವಿಲ್ಲದ ಮಾರ್ಗವೂ ಆಗಿದೆ.

ತೆರಿಗೆಗಳಲ್ಲಿ ವರಮಾನ, ವಾಣಿಜ್ಯ (ಸೇವಾ ಮತ್ತು ಮಾರಾಟ), ಆಸ್ತಿ, ಅಬಕಾರಿ, ಮನರಂಜನೆ, ತಲೆಗಂದಾಯ, ವಾರಸುದಾರಿಕೆ, ವೃತ್ತಿ ಇತ್ಯಾದಿ ಹಲವಾರು ವಿಧಗಳಿದ್ದು, ಜನರಿಂದ ಸರ್ಕಾರಕ್ಕೆ ಸಲ್ಲಬೇಕಾದ ಹಣವನ್ನು ನಿರ್ದೇಶಿಸುತ್ತದೆ. ಸಂಪನ್ಮೂಲಗಳು ಜನರ ಬಳಿ ಇದ್ದು, ಅದರ ಭಾಗವನ್ನು ಸರ್ಕಾರಕ್ಕೆ ನಿಯಮಗಳ ಪ್ರಕಾರ ಜನರು ನೀಡಿ ಸರ್ಕಾರವನ್ನು ಧಾರಣೆ ಮಾಡುತ್ತಾರೆ ಎಂಬುದನ್ನು ಇಲ್ಲಿ ಗಮನಿಸಬೇಕು. ಅಂದರೆ, ಸಂಪನ್ಮೂಲಗಳು ಜನರ ಬಳಿ ಮೊದಲು ಇದ್ದು ನಂತರ ಅದು ಸರ್ಕಾರಗಳಿಗೆ ತಲುಪುತ್ತವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಂಪನ್ಮೂಲಗಳನ್ನು ಹೊಂದುವ ಅಧಿಕಾರ (ಅಥವಾ ಹಕ್ಕನ್ನು) ಜನರು ಸಹಜವಾಗಿ ಹೊಂದಿದ್ದಾರೆ ಎನ್ನುವ ಗ್ರಹಿಕೆ ತೆರಿಗೆಯ ವಿವರಣೆಯ ಹಿಂದಿನ ಗ್ರಹಿಕೆಯಾಗಿದೆ. ಸಂಪನ್ಮೂಲಗಳು ಮೂರ್ತರೂಪದಲ್ಲಿ ಸ್ವತ್ತಿನ ಸ್ವರೂಪದಲ್ಲಿರುವುದರಿಂದಲೇ, ಸ್ವತ್ತಿನ ಹಕ್ಕನ್ನು ಸಾರ್ವತ್ರಿಕವಾಗಿ ಮತ್ತು ತಾತ್ವಿಕವಾಗಿಯೂ ಒಪ್ಪಿಕೊಳ್ಳಲಾಗಿದೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳಾಗಲೀ ಅಥವಾ ಭಾರತದ ಸಂವಿಧಾನದತ್ತ ಹಕ್ಕುಗಳಾಗಲೀ ಇದೇ ಗ್ರಹಿಕೆಯ ಮೇಲೆ ಸ್ವತ್ತಿನ ಹಕ್ಕನ್ನು ಮಾನ್ಯಮಾಡಿ ಒದಗಿಸಿವೆ.

ರೈತನೊಬ್ಬನು ತನ್ನ ಹೊಲಕ್ಕೆ ಭೋಜರಾಜನನ್ನು ಆಹ್ವಾನಿಸಿ, ನಂತರ ಹೊರಗೆ ಹೋಗಲು ತಿಳಿಸಿದಾಗಲೂ, ರಾಜನು ಮರುಮಾತಿಲ್ಲದಂತೆ ರೈತನ ಹೊಲದಿಂದ ತನ್ನ ಪರಿವಾರದೊಡನೆ ನಿರ್ಗಮಿಸುತ್ತಾನೆ. ಇದು ವೈಯುಕ್ತಿಕ ಸ್ವತ್ತುಗಳ ಪ್ರಾಮುಖ್ಯತೆಯನ್ನೂ, ಅವುಗಳು ಮಾನವ ಹಕ್ಕುಗಳೆಂಬ ಪ್ರಾಚೀನ ಗ್ರಹಿಕೆಯನ್ನೂ ತೋರಿಸುತ್ತದೆ.

ಇಷ್ಟು ವ್ಯಾಪಕ ಮಾನ್ಯತೆಯು ಖಾಸಗಿ ಸ್ವತ್ತಿಗಿದ್ದರೂ ಸಹ, ಆಸ್ತಿವಂತರ ಬಗ್ಗೆಯೂ, ಶ್ರೀಮಂತರ ಬಗ್ಗೆಯೂ ಸಾರ್ವಜನಿಕ ಪೂರ್ವಗ್ರಹಗಳಿವೆ. ಈ ಪೂರ್ವಗ್ರಹಗಳ ಹುಟ್ಟು ಮತ್ತು ಶಕ್ತಿಯ ಮೂಲ ಕಮ್ಯುನಿಸಂ ರೀತಿಯ ಸಿದ್ಧಾಂತಗಳಲ್ಲಿವೆ. ಜಗತ್ತಿನ ಅಸಮಾನತೆ, ಅನ್ಯಾಯಗಳಿಗೆಲ್ಲಾ ಖಾಸಗಿ ಸ್ವತ್ತನ್ನು ಸೃಷ್ಟಿಸಿಕೊಳ್ಳುವ ಅವಕಾಶವಿರುವುದೇ ಕಾರಣ ಎಂಬ ಅಭಿಪ್ರಾಯ ಈ ಸಿದ್ಧಾಂತಗಳ ಮೂಲದಲ್ಲಿದೆ. ಖಾಸಗಿ ಸ್ವತ್ತುಗಳೆಲ್ಲವನ್ನೂ ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂಬ ಅತಿರೇಕದ ಅಭಿಪ್ರಾಯಗಳು ಈ ಮೂಲದಿಂದ ಬರುತ್ತವೆ.

ತೆರಿಗೆಯು ಮೂಲಭೂತವಾಗಿ ಸರ್ಕಾರದ ನಿರ್ವಹಣೆಗೆ ಬೇಕಾಗಿರುವುದರಿಂದ, ಸರ್ಕಾರದ ಜವಾಬ್ದಾರಿಗಳು ಮತ್ತು ಚಟುವಟಿಕೆಗಳ ಮೇಲೆ ತೆರಿಗೆಯ ಮಟ್ಟ ನಿರ್ಧಾರವಾಗುತ್ತದೆ. ಸಮಾಜವನ್ನು ಎಷ್ಟರ ಮಟ್ಟಿಗೆ ನಿಯಂತ್ರಿಸಬೇಕೆಂಬ ಉದ್ದೇಶ ಸರ್ಕಾರಕ್ಕಿರುತ್ತದೋ, ಅದಕ್ಕೆ ಅನುಗುಣವಾಗಿ ಸರ್ಕಾರಕ್ಕೆ ಸಂಪನ್ಮೂಲಗಳ ಅಗತ್ಯಗಳು ಇರುತ್ತವೆ. ಈ ನಿಯಂತ್ರಣಗಳು ಸಾಮಾಜಿಕರ ವೈಯುಕ್ತಿಕ ಅಗತ್ಯಗಳನ್ನು ಪೂರೈಸಲು ಅಥವಾ/ಮತ್ತು ಜಾಗತೀಕರಣಗೊಂಡ ಜಗತ್ತಿನಲ್ಲಿ ದೇಶೀಯವಾಗಿ ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಬೇಕಾದ ಸರ್ಕಾರದ ಗಾತ್ರ – ಇವುಗಳ ಮೇಲೆ ಅವಲಂಬಿತವಾಗಿದೆ. ಸರ್ಕಾರದ ಮೂಲಭೂತ ಕರ್ತವ್ಯಗಳೆಂದು ಪರಿಗಣಿತವಾದ ವೈಯುಕ್ತಿಕ ಆಸ್ತಿಯ ಮತ್ತು ಸಾರ್ವಜನಿಕ ಸ್ವಾತಂತ್ರ್ಯದ ರಕ್ಷಣೆಯ ಜೊತೆಗೆ ಸಾರ್ವಜನಿಕ ಹಿತವೆಂಬ ವಿಸ್ತೃತ ಗುರಿಯೂ ಸೇರಿಕೊಂಡಾಗ ಸರ್ಕಾರದ ಗಾತ್ರ ಗಣನೀಯವಾಗಿ ಬೆಳೆಯುತ್ತದೆ.

ಸದುದ್ದೇಶದ – ದಕ್ಷ ಸರಕಾರಗಳಿದ್ದಾಗ, ಈ ಗುರಿಗಳ ನಿರ್ವಹಣೆಗೆ ತೆರಿಗೆಯ ಮಟ್ಟವು ಶೇಕಡಾ 20 ರಿಂದ ಶೇಕಡಾ 50/60 ರತನಕ ತಲುಪುವುದೆಂಬ ಅಂದಾಜುಗಳಿವೆ. ಕನಿಷ್ಠ ಮಟ್ಟದ ಸರ್ಕಾರಕ್ಕೆ ಶೇಕಡಾ 10ರ ತೆರಿಗೆಯ ವರಮಾನ ಸಾಕಾದರೆ, ಆರೋಗ್ಯ, ನಿರುದ್ಯೋಗ, ವಸತಿ ಒದಗಿಸುವುದು ಇತ್ಯಾದಿ ಜವಾಬ್ದಾರಿಗಳನ್ನು ತಾನೇ ನಿರ್ವಹಿಸುವ ಸರ್ಕಾರಕ್ಕೆ ಶೇಕಡಾ 50ಕ್ಕೂ ಮೀರಿದ ತೆರಿಗೆಯ ವರಮಾನ ಬೇಕಾಗುತ್ತದೆ.

ದಕ್ಷ ಸರಕಾರವು ತನ್ನ ಜವಾಬ್ದಾರಿಯ ವ್ಯಾಪ್ತಿಯನ್ನು ಎಷ್ಟೇ ವಿಶಾಲವಾಗಿ ಗುರುತಿಸಿಕೊಂಡಿದ್ದರೂ ಸಹ ಅದರಲ್ಲಿ ತೊಂದರೆಯೇನೂ ಇಲ್ಲ. ಆದರೆ ನಿಜವಾದ ಸಮಸ್ಯೆ ಬರುವುದು, ಸರಕಾರಿ ಯಂತ್ರದಲ್ಲಿ ಅನಿವಾರ್ಯ ಎನ್ನಲಾಗುವ ಅದಕ್ಷತೆಯು ಸರಕಾರದ ರೀತಿ–ನೀತಿಗಳ ಪರಿಧಿಯ ಬಗ್ಗೆ ಚರ್ಚೆಗಳನ್ನು ಸೃಷ್ಟಿಸುತ್ತವೆ. ಈ ಅದಕ್ಷತೆಯು ಹೆಚ್ಚಿದ ತೆರಿಗೆಯ ಮಟ್ಟದಲ್ಲಿ ಪ್ರತಿಫಲಿತವಾಗುತ್ತದೆ. ಹಾಗಾಗಿ, ದೇಶಗಳ ತೆರಿಗೆ ಮಟ್ಟವನ್ನು ಹೋಲಿಸುವಾಗ, ಸರ್ಕಾರದ ಜವಾಬ್ದಾರಿಗಳ ವ್ಯಾಪ್ತಿಯ ಜೊತೆ, ಅವುಗಳ ದಕ್ಷತೆಯ ವಿಶ್ಲೇಷಣೆಯೂ ಸಹ ಬೇಕಾಗುತ್ತದೆ. ದಕ್ಷತೆ ಎಂದಾಗ ಪ್ರಾಮಾಣಿಕ ಕಾರ್ಯಕ್ಷಮತೆಗಳ ಮಟ್ಟದ ಜೊತೆಗೆ, ದುರುದ್ದೇಶದ ಭ್ರಷ್ಟಾಚಾರವನ್ನೂ ಸಹ ಸೇರಿಸಬಹುದು.

ಇತ್ತೀಚಿನ ದಿನಗಳಲ್ಲಿ, ಐತಿಹಾಸಿಕವಾಗಿ ಸರಕಾರಿ ಸ್ವಾಮ್ಯದಲ್ಲಿದ್ದ ಹಲವಾರು ಸೇವೆಗಳನ್ನು ನಿಗಮಗಳ ಮೂಲಕ (ವಿದ್ಯುತ್, ಜಲ ಇತ್ಯಾದಿ) ಸಾರ್ವಜನಿಕರಿಗೆ ಒದಗಿಸುವ ಬೆಳವಣಿಗೆ ಆಗಿದೆ. ಜನರು ಈ ಸೇವೆಗಳನ್ನು ಹಣ ಪಾವತಿಸಿ ಪಡೆಯುತ್ತಾರೆ. ಹಾಗೆಯೇ, ಸಾರ್ವಜನಿಕ ಮೂಲಭೂತ ಸೌಕರ್ಯಗಳನ್ನು ಖಾಸಗಿ ಸಹಭಾಗಿತ್ವದ ಮೂಲಕ ಸೃಷ್ಟಿಸುವ ಪ್ರಕ್ರಿಯೆ ಬಲಗೊಳ್ಳುತ್ತಿದೆ. ಈ ಚಟುವಟಿಕೆಗಳಲ್ಲಿ ಸರ್ಕಾರದ ಪಾತ್ರ ನೇರವಾಗಿಲ್ಲದಿದ್ದರೂ, ಪರೋಕ್ಷವಾಗಿ ಸರ್ಕಾರದ ಪ್ರಭಾವ ಮತ್ತು ನಿರ್ಧಾರಗಳು ಇದ್ದೇ ಇರುತ್ತವೆ. ಹೀಗೆ, ತೆರಿಗೆಯ ಮಟ್ಟದಲ್ಲಿ ಸೇರದ ಆದರೆ ಸಾರ್ವಜನಿಕರು ಭರಿಸಬೇಕಾದ ಅನೇಕ ವೆಚ್ಚಗಳು ಸರ್ಕಾರದ ದಕ್ಷತೆಯನ್ನು ಅವಲಂಬಿಸಿದೆ.

ಸಂಪನ್ಮೂಲದ ಹಂಚಿಕೆಯೂ ಸಹ ಸರಕಾರದ ವಿಸ್ತೃತ ಜವಾಬ್ದಾರಿಗಳಲ್ಲಿ ಒಂದಾಗಿದೆ. ಬಡತನ ನಿರ್ಮೂಲನದಂಥಾ ಕಾರ್ಯಕ್ರಮಗಳಾಗಲೀ, ಅಥವಾ ಭೂ ಸುಧಾರಣೆಯಂಥಾ ಯೋಜನೆಗಳಾಗಲೀ, ಸರಕಾರದ ಕಾರ್ಯಕ್ರಮಗಳಲ್ಲಿ ಸೇರಬಹುದು. ಆದರೆ, ಅವುಗಳನ್ನು ಖಾಸಗೀ ಆಸ್ತಿಯ ಮರುಹಂಚಿಕೆಯ ಮೂಲಕ ಮಾಡುವ ನೀತಿಗಳನ್ನು ಸರ್ಕಾರ ಅಳವಡಿಸಿಕೊಂಡರೆ ಆಗ ವೈರುಧ್ಯಗಳಿಗೆ ಆಸ್ಪದ ನೀಡಿದಂತಾಗುತ್ತದೆ. ಏಕೆಂದರೆ, ಸಂಪನ್ಮೂಲಗಳನ್ನು ಸಾರ್ವಜನಿಕರು ಹೊಂದುವ ಹಕ್ಕನ್ನು ಈ ರೀತಿಯ ಕಾರ್ಯಕ್ರಮಗಳು ತೆರಿಗೆ ಸಂಗ್ರಹಣೆಯ ನೆಲೆಯಿಂದ ಬಹುದೂರ ತೆಗೆದುಕೊಂಡು ಹೋಗುತ್ತವೆ.

ಐತಿಹಾಸಿಕವಾಗಿ ನೋಡಿದಾಗ, ಆಫ್ರಿಕಾದಲ್ಲಿ ಬ್ರಿಟಿಷ್ ವಸಾಹತುಶಾಹಿ ಸರ್ಕಾರಗಳು ಈ ನಿಟ್ಟಿನಲ್ಲಿ ಕೈಗೊಂಡ ನಿರ್ಣಯಗಳ ಅನಾಹುತಕಾರೀ ಪರಿಣಾಮಗಳು ಗೋಚರವಾಗುತ್ತವೆ. ಕೈಗಾರೀಕರಣಗೊಂಡ ಬ್ರಿಟಿಷ್ ಸರ್ಕಾರದ ಆಹಾರ ಭದ್ರತೆಯನ್ನು ಸಾಧಿಸುವ ಸಲುವಾಗಿ ಜಾರಿಗೊಳಿಸಿದ ನೀತಿಗಳ ನಿರ್ವಹಣೆಗಾಗಿ ಆಫ್ರಿಕಾ ದೇಶದಲ್ಲಿ ಕೆಲಸಗಾರರ ಅಗತ್ಯ ಇತ್ತು. ಅದನ್ನು ಸೃಷ್ಟಿಸುವ ನಿಟ್ಟಿನಲ್ಲಿ ಸರ್ಕಾರವು ವಾರಸುದಾರಿಕೆ ತೆರಿಗೆಯನ್ನು ಬಿಗಿಗೊಳಿಸಿ, ಪ್ರತಿಕುಟುಂಬದ ಬಹುಜನರನ್ನು ಭೂರಹಿತರನ್ನಾಗಿ ಮಾಡಿತು. ಅದಕ್ಷತೆ ಮತ್ತು/ಅಥವಾ ಭ್ರಷ್ಟಚಾರ ಮಿತಿಮೀರಿದಂತೆ, ಸರ್ಕಾರದ ಆದಾಯವು ತೆರಿಗೆಯ ಸ್ವರೂಪದಲ್ಲಿರುವ ಜನರ ಸಂಪನ್ಮೂಲದ ಒಂದು ಭಾಗ ಎನ್ನುವುದರ ಬದಲು, ದೇಶದ ಸರ್ವಸ್ವತ್ತೂ ಸರ್ಕಾರದ ಒಡೆತನಕ್ಕೆ ಸೇರಿದ್ದು ಎಂಬಲ್ಲಿಗೆ ಮುಟ್ಟುವ ಸಾಧ್ಯತೆ ಇದೆ. ಕಮ್ಯುನಿಸಂ ವ್ಯವಸ್ಥೆಯಲ್ಲಿ ಇದು ಸೈದ್ಧಾಂತಿಕ ವಿವರಣೆಯೊಂದಿಗೆ ಅನುಷ್ಠಾನಕ್ಕೆ ಬಂದರೆ, ಬಂಡವಾಳಶಾಹೀ ವ್ಯವಸ್ಥೆಯಲ್ಲಿ ವಾರಸುದಾರಿಕೆಯಂಥಾ ತೆರಿಗೆಯ ಮೂಲಕ ಇದನ್ನು ಸಾಧಿಸಬಹುದಾಗಿದೆ.

ಅಭಿವೃದ್ಧಿಹೊಂದಿದ ರಾಷ್ಟ್ರಗಳ ಜೀವನ ಮಟ್ಟವನ್ನು ಮುಟ್ಟುವ ಧಾವಂತದಲ್ಲಿರುವ ಅಭಿವೃದ್ಧಿಶೀಲ ದೇಶಗಳ ಸಮರ್ಥ ಸರ್ಕಾರಗಳು ತಮಗೆ ಬೇಕಾದ ಸಂಪನ್ಮೂಲಗಳನ್ನು ನಾಗರಿಕರ ಆಸ್ತಿ– ಆಪತ್ಕಾಲೀನ ಉಳಿತಾಯಗಳ ಬೆಂಬಲದ ಮೂಲಕ ಕ್ರೋಡೀಕರಿಸುವ ಯೋಚನೆ ಮಾಡಬಹುದು. ಸಾಮರಸ್ಯ ಇಲ್ಲದ ಸಮಾಜಗಳಲ್ಲಿ ಇರುವ ಅಸಮರ್ಥ ನೇತೃತ್ವಗಳು ಒಬ್ಬರ ಆಸ್ತಿಯನ್ನು ಇನ್ನೊಬ್ಬರಿಗೆ ನೀಡುವ ಕಾರ್ಯಕ್ರಮಗಳಿಗೆ ಕೈ ಹಾಕಬಹುದು. ಈ ಎಲ್ಲಾ ಯೋಜನೆ – ಯೋಚನೆಗಳ ಹಿಂದೆ ಎಲ್ಲರನ್ನೂ ಶ್ರೀಮಂತರನ್ನಾಗಿ ಮಾಡುವ ಸದುದ್ದೇಶವಿರಬಹುದು. ಆದರೆ, ಅದು ಸಾಧ್ಯವಾಗದೇ ಸಾಮಾಜಿಕ ವಿಷಮತೆಗೆ ಕಾರಣವಾಗಬಹುದು.

ಈ ಸನ್ನಿವೇಶದಲ್ಲಿ, ಸರಳ ಜೀವನವನ್ನು ಸಂತೃಪ್ತಿಯಿಂದ ನಡೆಸುವ ಬಹುಜನರು ಇರುವ ಸಮಾಜದತ್ತ ಸರ್ಕಾರಗಳು ಗಮನ ಹರಿಸುವುದು ಲಾಭಕರ. ಅಂಥಹಾ ಸಮಾಜದಲ್ಲಿರುವ ಶ್ರೀಮಂತರು ಪರೋಪಕಾರಿ ದೃಷ್ಟಿಯಿಂದ ದಾನಗಳನ್ನು ಮಾಡುವ ಸಂಸ್ಕಾರವಂತರಾಗಿರುವುದು ಸಾಧ್ಯ ಎಂಬುದನ್ನು ಭಾರತೀಯರು ಬಲ್ಲರು. ■

## ಸಂಸ್ಮರಣೆ ಬಿಪಿನ್ ಚಂದ್ರಪಾಲ್ (7 ನವೆಂಬರ್ 1858 – 20 ಮೇ 1932)



"ಸರ್ಕಾರವೇನಾದರೂ ಬಂದು ಸ್ವರಾಜ್ಯ ತೆಗೆದುಕೊಳ್ಳಿ ಎಂದು ಹೇಳಿದರೆ ಧನ್ಯವಾದ ನಿಮಗೆ ಎನ್ನುವೆ. ಆದರೆ, ಸ್ವೀಕರಿಸುವುದಿಲ್ಲ. ಸ್ವರಾಜ್ಯ ಪಡೆಯುವುದು ನಮ್ಮ ಸಾಮರ್ಥ್ಯದಿಂದಲೇ ಹೊರತು ಬೇಡುವುದರಿಂದಲ್ಲ. ಬೇಡಿ ಸಾಧಿಸಬಹುದಾದರೂ ಏನು? ಅಸಹಕಾರ ಮಾಡಿ ಬ್ರಿಟಿಷ್ ಸರ್ಕಾರದ ಯಂತ್ರ ನಡೆಸಲು ಜನ ಸಿಗದಂತೆ ಮಾಡುವುದೇ ನಮ್ಮ ಮುಂದಿನ ಗುರಿ" ಎಂದು ಗುಡುಗಿದ್ದರು ಬಿಪಿನ್ ಚಂದ್ರಪಾಲ್.

ಪಾಲ್ ಹೆಸರು ಕೇಳಿದರೆ ಬ್ರಿಟಿಷರು ನಡುಗುತ್ತಿದ್ದರು. ದೇಶಭಕ್ತರು ರೋಮಾಂಚಿತರಾಗುತ್ತಿದ್ದರು. ಪಾಲ್ ದೇಶಕ್ಕಾಗಿ ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮದೆಲ್ಲವನ್ನೂ ಅರ್ಪಿಸಲು ಸಿದ್ಧರಿದ್ದವರು. ಅವರು ಕೈಯಲ್ಲಿದ್ದ ಸರ್ಕಾರಿ ಶಿಕ್ಷಕ ಮತ್ತು ಗ್ರಂಥಪಾಲಕ ಹುದ್ದೆಯನ್ನು ತ್ಯಜಿಸಿ ಹೋರಾಟದತ್ತ ಹೊರಳಿಕೊಂಡವರು. ಹೋರಾಟ ಅವರಿಗೆ ಜನ್ಮೇಪಿಯಾಗಿತ್ತು. ಕೆಚ್ಚು ರಕ್ತಗತವಾಗಿ ಬಂದಿತ್ತು. ಅವರು ಬದುಕಿನುದ್ದಕ್ಕೂ ಕೇವಲ ದೇಶಕ್ಕಾಗಿ ತುಡಿದವರು ಮತ್ತು ಮಿಡಿದವರು. ಪಾಲ್ ದೇಶಕ್ಕೆ ದೊರೆತ ಅನರ್ಘ್ಯ ರತ್ನ ಎಂದರೂ ಅತಿಶಯೋಕ್ತಿ ಆಗಲಾರದು.

ಬಿಪಿನ್ ಚಂದ್ರಪಾಲ್ ಅಪ್ಪಟ ಸ್ವಾತಂತ್ರ್ಯ ಸೇನಾನಿ. ನವೆಂಬರ್ 7 1858 ಅವರ ಜನನ. ಬಾಲ್ಯದಿಂದಲೇ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡಿದ್ದ ಪಾಲ್ ದೇಶದೆಡೆಗೆ ಅಪಾರ ಭಕ್ತಿ ಹೊಂದಿದ್ದರು. ದೇಶ–ಧರ್ಮದ ವಿಚಾರ ಬಂದಾಗ ತ್ಯಾಗದ ಮಾತುಗಳನ್ನು ಆಡುತ್ತಿದ್ದರು. ಕ್ರಾಂತಿಯಿಂದ ಮಾತ್ರ ಸ್ವಾತಂತ್ರ್ಯ ಸಾಧ್ಯ ಮತ್ತು ಅಂತಹ ಸ್ವಾತಂತ್ರ್ಯಕ್ಕೆ ಮಾತ್ರ ಬೆಲೆ ಎಂದು ಅವರು ಅರಿತಿದ್ದರು. ಪಾಲ್ ಪ್ರಖರ ವಾಗ್ಮಿ, ಅದ್ಭುತ ಲೇಖಕ ಮತ್ತು ಪತ್ರಕರ್ತರಾಗಿದ್ದರಿಂದ ತಮ್ಮ ವಿಚಾರಗಳನ್ನು ದೇಶ ಬಾಂಧವರಿಗೆ ಅತ್ಯಂತ ಪರಿಣಾಮಕಾರಿಯಾಗಿ ತಲುಪಿಸುತ್ತಿದ್ದರು. ಮೊದಲು ಕಾಂಗ್ರೆಸ್‌ನಲ್ಲಿದ್ದ ಪಾಲ್ ನಂತರದ ದಿನಗಳಲ್ಲಿ ಅಲ್ಲಿಂದ ಹೊರ ನಡೆದು ಬಂದಿದ್ದರು. ಬ್ರಿಟಿಷರಿಗೆ ಪತ್ರ ಬರೆದು ದಯನೀಯವಾಗಿ ಸ್ವಾತಂತ್ರ್ಯ ಕೊಡಿ ಎಂತಲೂ ಮತ್ತು ಶಾಸನಸಭೆಗಳಲ್ಲಿ ಮಂತ್ರಿ ಸ್ಥಾನ ಕೊಡಿ ಎಂದು ಪ್ರಾರ್ಥಿಸುತ್ತಿದ್ದ ಮಂದಗಾಮಿಗಳನ್ನು ಪಾಲ್ ಕಟುವಾಗಿ ಟೀಕಿಸುತ್ತಿದ್ದರು.

ಅವರು ಬಾಲ ಗಂಗಾಧರ ತಿಲಕ್, ಲಾಲ ಲಜಪತ್ ರಾಯ್ ಅವರೊಂದಿಗೆ ಕೈ ಜೋಡಿಸಿ ತೀವ್ರಗಾಮಿತನದಿಂದ ಬ್ರಿಟಿಷರನ್ನು ಎದುರಿಸುತ್ತಿದ್ದರು. ಈ ಮೂವರು ಭಾರತದಲ್ಲಿ ತ್ರಿವಳಿಗಳು ಎಂತಲೇ ಹೆಸರಾಗಿದ್ದರು. ದೇಶದ ಬಹುತೇಕ ಜನರಿಗೆ ಇವರ ಹೋರಾಟದ ಮಾರ್ಗ ಹಿಡಿಸಿತು. ಸಹಸ್ರಾರು ದೇಶಭಕ್ತರು ಇವರ ಬೆನ್ನಿಗೆ ನಿಂತಿದ್ದರು ಕೂಡ.

ಬಹುಕಾಲ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ ಪಾಲ್ ಮುಂದೆ ತಮ್ಮದೇ 'ನ್ಯೂ ಇಂಡಿಯಾ' ಎಂಬ ಪತ್ರಿಕೆಯ ಮೂಲಕ ರಾಷ್ಟ್ರೀಯವಾದಿ ಚಿಂತನೆಗಳನ್ನು ಬರೆದು ಜನರನ್ನು ಸೆಳೆದರು. ಪಾಲ್ ಅವರ ಚಿಂತನೆಗಳು ಹಲವರನ್ನು ಹೋರಾಟದತ್ತ ಪ್ರೇರೇಪಿಸುತ್ತಿದ್ದವು. ಅಷ್ಟೇ ಅಲ್ಲ. ಸಮಾಜ ಸುಧಾರಕರೂ ಆಗಿದ್ದ ಪಾಲ್ ದೇಶದ ಶೋಷಿತ ಸಮುದಾಯದ ಬಗ್ಗೆ ಕಾಳಜಿ ಹೊಂದಿದ್ದರು. ಕಾರ್ಮಿಕರ ನ್ಯಾಯಯುತವಾದ ವೇತನಕ್ಕಾಗಿ ಶ್ರಮಿಸಿದ್ದರು. ಆಗಾಗ್ಗೆ ದೇಶದ ಅಭದ್ರತೆ ಬಗ್ಗೆ ಹೇಳುತ್ತಿದ್ದರು.

ಪಾಲ್ ಅವರದ್ದು ವಿಭಿನ್ನ ಮತ್ತು ವಿಶಿಷ್ಟ ವ್ಯಕ್ತಿತ್ವ ಎಂಬುದಕ್ಕೆ ಅವರ ಜೀವನದ್ದೇ ಒಂದು ಉದಾಹರಣೆ ಕೊಡಬಹುದು; ಪಾಲ್ ಸಮಾಜದಲ್ಲಿ ಸುಧಾರಣೆ ತರಲೆಂದು ತಮ್ಮ ಹೆಂಡತಿ ತೀರಿಕೊಂಡಾಗ ಓರ್ವ ವಿಧವೆ ಮಹಿಳೆಯನ್ನು ಆ ಕಾಲಕ್ಕೆ ಮದುವೆಯಾಗಿ ಕ್ರಾಂತಿಕಾರಿ ಬದಲಾವಣೆಗೆ ಮುನ್ನುಡಿ ಬರೆದರು.ಮಮಾನವೀಯತೆಯ ಸಂದೇಶ ಸಾರಿದರು. ಪಾಲ್ ಅವರು ಅಂದು ಹೇಳಿದ ಮತ್ತು ಬರೆದಿಟ್ಟ ಸಾಕಷ್ಟು ವಿಚಾರಗಳು ಈಗಲೂ ಪ್ರಸ್ತುತ. ಭಾರತಕ್ಕೆ ಪೂರಕ.

ನವ ಭಾರತದ ಕನಸನ್ನು ಕಂಡಿದ್ದ ಪಾಲ್ ತಮ್ಮ ಬದುಕಿನ ಕೊನೆಯ ಗಳಿಗೆಯವರೆಗೂ ಅಪ್ರತಿಮ ದೇಶಭಕ್ತನಾಗಿಯೇ ಉಳಿದಿದ್ದರು. ಅವರು 1932 ಏಪ್ರಿಲ್ 20 ರಂದು ಈ ಲೋಕವನ್ನು ಅಗಲಿದರು.

## ಸ್ವಯಂಸೇವಕತ್ವ ಕಲಿಸಿದ ಪಾಠ ಜೀವ ಉಳಿಸಿತು

ಹುಟ್ಟು ಮತ್ತು ಸಾವುಗಳನ್ನು ತುಂಬಾ ಹತ್ತಿರದಿಂದ ನೋಡುವ ವೈದ್ಯರು ಪ್ರತಿದಿನ ಒಂದಲ್ಲ ಒಂದು ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಆದರೆ ಅಂದು ಡಾ. ರಿಷಿಯವರ ಜೀವನದಲ್ಲಿ ಅದು ಎಲ್ಲಕ್ಕಿಂತ ದೊಡ್ಡದಾದ ಪರೀಕ್ಷೆಯಾಗಿತ್ತು. ವಾರ್ಡ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ 23 ಹಸುಗೂಸುಗಳ ಜೀವ ಅಪಾಯದ ಅಂಚಿನಲ್ಲಿತ್ತು, ಅಗ್ನಿಶಾಮಕ ಸಿಲಿಂಡರ್‌ನ ಸಹಾಯದಿಂದ ಬೆಂಕಿಯನ್ನು ನಂದಿಸುವ ಪ್ರಯತ್ನವೂ ವಿಫಲವಾಯಿತು. ಮಧ್ಯಪ್ರದೇಶದ ಛತರ್‌ಪುರ ಜಿಲ್ಲೆಯ ಆಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ವಾರ್ಡಿನ ಎ.ಸಿ.ಯಲ್ಲಿ ಕಾಣಿಸಿಕೊಂಡ ಬೆಂಕಿಯು ನವಜಾತ ಶಿಶುಗಳ ಜೀವವನ್ನು ಅಪಾಯಕ್ಕೆ ಸಿಲುಕಿಸಿತು. ಆಗ ಅಲ್ಲಿ ಕರ್ತವ್ಯದಲ್ಲಿ ತೊಡಗಿದ್ದ ಸಂಘದ ಪ್ರಥಮ ವರ್ಷ ಶಿಕ್ಷಿತ ಸ್ವಯಂಸೇವಕರೂ ಆದ ಡಾ. ರಿಷಿ ದ್ವಿವೇದಿ ತಮ್ಮ ಪ್ರಾಣವನ್ನು ಲೆಕ್ಕಿಸದೆ ಅವರ ಅದಮ್ಯ ಸಾಹಸ ಮತ್ತು ತ್ವರಿತ ಬುದ್ಧಿವಂತಿಕೆಯಿಂದ ಹಸುಳೆಗಳಿಗೆ ಬೆಂಕಿಯು ತಾಗದಂತೆ ರಕ್ಷಿಸಿದರು.



ಜುಲೈ 7 ರಂದು ಸಂಜೆ 7 ಗಂಟೆಯ ತನಕ ಛತರ್‌ಪುರ ಜಿಲ್ಲಾ ಆಸ್ಪತ್ರೆಯಲ್ಲಿ ಎಲ್ಲವೂ ಚೆನ್ನಾಗಿತ್ತು, ಮಕ್ಕಳ ವಾರ್ಡಿನಿಂದ ಆಗಾಗ ಪುಟ್ಟ ಮಕ್ಕಳ ಅಳುವಿನ ಧ್ವನಿ ಕೇಳಿ ಬರುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಅಲ್ಲಿದ್ದ ಎ.ಸಿ. ಯಂತ್ರಗಳಲ್ಲಿ ಬೆಂಕಿ ಕಾಣಿಸಿಕೊಂಡು, ಇದರಿಂದಾಗಿ ವಿದ್ಯುತ್ ಕಡಿತಗೊಂಡು ಕತ್ತಲೆ ಆವರಿಸಿತ್ತು. ಬೆಂಕಿಯು ಭಯಾನಕ ರೂಪವನ್ನು ತಾಳುವ ಮೊದಲು ಅಲ್ಲಿ ಉಪಸ್ಥಿತರಿದ್ದ ಚಿಕಿತ್ಸಾ ಅಧಿಕಾರಿಗಳಾದ ಡಾ. ರಿಷಿ ದ್ವಿವೇದಿಯವರು ಅಗ್ನಿಶಾಮಕ ಸಿಲಿಂಡರ್‌ನ ಸಹಾಯದಿಂದ ಬೆಂಕಿಯನ್ನು ನಂದಿಸುವ ಪ್ರಯತ್ನವನ್ನು ಪ್ರಾರಂಭಿಸಿದರು. ಆದರೆ ಸಿಲಿಂಡರ್‌ನ ಗ್ಯಾಸ್ ಖಾಲಿಯಾದ ನಂತರವೂ ಬೆಂಕಿಯನ್ನು ಆರಿಸಲಾಗದ ಕಾರಣ ವಾರ್ಡಿನ ತುಂಬ ಉಸಿರುಗಟ್ಟಿಸುವಷ್ಟು ಹೊಗೆ ಆವರಿಸಿತ್ತು. ಕರ್ತವ್ಯ ನಿರತರಾಗಿದ್ದ ದಾದಿಯರಾದ ಸಂಗೀತ ಮತ್ತು ಜಯ ಅವರ ಧೈರ್ಯವೂ ಪರಿಹಾರ ಸೂಚಿಸಲು ಪ್ರಾರಂಭಿಸಿತು. ಅವರು ತಮ್ಮ ಪ್ರಾಣವನ್ನು ರಕ್ಷಿಸಿಕೊಂಡು ಹೊರಹೋಗುವಂತೆ ವೈದ್ಯರನ್ನು ಬೇಡಿಕೊಂಡರು, ಆದರೆ ಡಾ.ರಿಷಿಯವರ ಒಳಗಿನ ಸ್ವಯಂಸೇವಕತ್ವ ಆ ಮಕ್ಕಳನ್ನು ಅಪಾಯದಲ್ಲಿ ಬಿಡಲು ಸಿದ್ಧರಿರಲಿಲ್ಲ. ಶಾಖೆಯಲ್ಲಿ ಹಾಡುತ್ತಿದ್ದ "ಜೀವನ್ ಬನ್ ತೂ ದೀಪ್ ಸಮಾನ್ ಜಲ್–ಜಲ್ ಕರ್ ಸರ್ವಸ್ವ್ ಮಿಟಾ ದೆ ಬನ್ ಕರ್ತವ್ಯ್ ಪ್ರಧಾನ್" ಎಂಬ ಹಾಡಿನ ಸಾಲುಗಳು ಕಿವಿಯಲ್ಲಿ ಪ್ರತಿಧ್ವನಿಸತೊಡಗಿದವು. ಅವರು ದಾದಿಯರ ಸಹಾಯದಿಂದ ಮಕ್ಕಳನ್ನು ಎತ್ತಿಕೊಂಡು ಬೇರೆ ವಾರ್ಡ್‌ಗಳಿಗೆ ಸ್ಥಳಾಂತರಿಸತೊಡಗಿದರು. ಹಾಗೆಯೆ ಅಲ್ಲಿ ನೆರೆದಿದ್ದ ರೋಗಿಗಳ ಸಂಬಂಧಿಕರು ಸಹಾಯಕ್ಕೆ ಬಂದು ನವಜಾತ ಶಿಶುಗಳನ್ನು ಸುರಕ್ಷಿತವಾಗಿ ಹೊರತರಲಾಯಿತು.

ಡಾ.ರಿಷಿಯವರ ಪ್ರಕಾರ ಈ ಕಠಿಣ ಪರಿಸ್ಥಿತಿಯಲ್ಲಿ ನಾನು ಏನೇ ಮಾಡಿದ್ದರು ಅದು ಸಂಘದಲ್ಲಿ ದೊರೆತ ಸಂಸ್ಕಾರದ ಪ್ರಭಾವದಿಂದ ಸಾಧ್ಯವಾಯಿತು ಎಂದು ಹೇಳುತ್ತಾರೆ.

## ಎರ್ಲೋ ಕೇಳಿದ ಕಥೆ

### ಬೇಕು ಕೆಲಸ ಮಾಡುವವರು, ಹೇಳುವವರಲ್ಲ!

ನಾಗಪುರದಲ್ಲಿ ಒಂದು ಸುಪರಿಚಿತ ಶ್ರೀಮಂತ ಮನೆತನ. ಮನೆಯ ಯಜಮಾನರು ಎಲ್ಲರಿಗೂ ಬೇಕಾದವರು. ಒಮ್ಮೆ ಆ ಪರಿವಾರದ ಬಾಲಕನೊಬ್ಬನಿಗೆ ಚೌಲದ ಕಾರ್ಯಕ್ರಮ. ಊರಿಗೆಲ್ಲ ಆಹ್ವಾನ ನೀಡಲಾಗಿತ್ತು. ನಗರದ ಪ್ರಮುಖರೆಲ್ಲ ಬಾಲಕನಿಗೆ ಆಶೀರ್ವಾದ ಮಾಡಲು ಬಂದಿದ್ದರು. ಯಜಮಾನರೇ ಸ್ವತಃ ದ್ವಾರದಲ್ಲಿ ನಗುಮುಖದಿಂದ ನಿಂತು ಎಲ್ಲರನ್ನು ಸ್ವಾಗತಿಸುತ್ತಿದ್ದರು. ಧಾರ್ಮಿಕ ವಿಧಿಗಳ ನಂತರ ಆಹ್ವಾನಿತರಿಗೆಲ್ಲ ಪುಷ್ಕಳ ಭೋಜನ. ನಂತರ ಯಜಮಾನರಿಂದಲೇ ಎಲ್ಲರಿಗೂ ತಾಂಬೂಲ ವಿತರಣೆ, ಅವರು ನಿಂತಲ್ಲೆ ಸಮೀಪದಲ್ಲಿ ತಾಂಬೂಲದ ತಟ್ಟೆ. ಆದರೆ ಅದರಲ್ಲಿ ಸುಣ್ಣವಿರಲಿಲ್ಲ. ಸುಣ್ಣವಿಲ್ಲದೆ ಎಲೆ ಹಾಕಿಕೊಳ್ಳುವುದು ಸಾಧ್ಯವೇ? ಒಬ್ಬರು "ಅದರಲ್ಲಿ ಸುಣ್ಣವಿಲ್ಲವಲ್ಲ" ಎಂದು ಯಜಮಾನರಿಗೆ ತಿಳಿಸಿದರು. ಅವರು ಕೂಡಲೇ ತಮ್ಮ ಮ್ಯಾನೇಜರ್ ಬಳಿ ಸುಣ್ಣ ತಂದಿಡುವಂತೆ ಹೇಳಿದರು. ಮ್ಯಾನೇಜರ್ ತನ್ನ ನೌಕರನಿಗೆ, ಅವನು ಮತ್ತೊಬ್ಬನಿಗೆ, ಅಲ್ಲಿಂದ ಮಗದೊಬ್ಬನಿಗೆ – ಹೀಗೆ "ಸುಣ್ಣವಿಲ್ಲ, ಅದನ್ನು ತನ್ನಿ?" ಎನ್ನುವುದು ವರ್ಗಾವಣೆಯಾಗುತ್ತ ಹೋಯಿತು. ಹೀಗೆ 10–15 ನಿಮಿಷಗಳ ಕಾಲ ಮನೆಯಲ್ಲೆಲ್ಲ "ಸುಣ್ಣವಿಲ್ಲ. ತಂದಿಡಿ" ಎಂಬ ಗುಲ್ಲು. ಆದರೆ ಸುಣ್ಣ ಮಾತ್ರ ಬರಲೇ ಇಲ್ಲ.

ಕಾರ್ಯಕ್ರಮಕ್ಕೆ ಡಾ. ಕೇಶವ ಬಲಿರಾಮ ಹೆಡಗೇವಾರ್ ಅವರೂ ಬಂದಿದ್ದರು. ಅವರು ಆ ಮನೆಗೆ ಬಂದು ಹೋಗುತ್ತಿದ್ದುದು ಬಹಳ. ಆ ಮನೆಯಲ್ಲಿ ಎಲ್ಲೆಲ್ಲಿ ಏನೇನಿದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಅವರು ತಮ್ಮ ಆಪ್ತರೊಬ್ಬರ ಬಳಿ "ನೋಡಿ, ಸುಣ್ಣದ ಡಬ್ಬಿ ಇಂತಹ ಕಡೆಯಿದೆ. ಹೋಗಿ ತನ್ನಿ" ಎಂದರು. ಕ್ಷಣಾರ್ಧದಲ್ಲಿ ಸುಣ್ಣದ ಡಬ್ಬಿ ಡಾಕ್ಟರ್‌ಜಿಯವರ ಕೈಗೆ ಬಂತು. ಅವರದನ್ನು ತಾಂಬೂಲದ ತಟ್ಟೆಯಲ್ಲಿರಿಸಿದರು.

ಈ ಪ್ರಸಂಗವನ್ನು ಉಲ್ಲೇಖಿಸಿ ಡಾಕ್ಟರ್‌ಜಿ ಹೇಳುತ್ತಿದ್ದ ಮಾತು, "ಇದು ನಮ್ಮ ಸಮಾಜದ ಈಗಿನ ಸ್ಥಿತಿ: ಸುಣ್ಣದ ಡಬ್ಬಿಯಂತಹ ಒಂದು ಮಾಮೂಲಿ ವಸ್ತು. ಅದಕ್ಕೆ ಸಂಬಂಧಿಸಿದಂತೆ ಇಷ್ಟು ರಾದ್ಧಾಂತ – ಅದನ್ನು ತಂದಿರಿಸಲು ತಗಲಿದ ಸಮಯ ಹದಿನೈದು ನಿಮಿಷ. ಕಾರಣವೇನು? ಎಲ್ಲರೂ ಕೆಲಸ ಹೇಳುವವರೇ, ಮಾಡುವವರಿಲ್ಲ. ಸ್ವತಃ ಕೆಲಸ ಮಾಡುವವರಿದ್ದಲ್ಲಿ, ಒಂದೆರಡು ನಿಮಿಷದಲ್ಲಿ ಆ ಕೆಲಸ ಖತಂ."

## ಪುಸ್ತಕ ಪರಿಚಯ

### ಎಲ್ಲರಿಗೂ ಬೇಕಾದ ಅಂಬೇಡ್ಕರ್: ಗೊತ್ತೇ ಇರದ ಅವೆಷ್ಟೋ ಸಂಗತಿಗಳು

**ಲೇಖಕರು:** ಜ ಬಿ ಹರೀಶ

**ಪ್ರಕಾಶಕರು:** ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ

**ಬೆಲೆ:** 150




ಡಾ॥ ಭೀಮರಾವ್ ಅಂಬೇಡ್ಕರ್ ಖಂಡಿತಕ್ಕೂ ಯಾವುದೋ ಒಂದು ವರ್ಗಕ್ಕೆ ಮಾತ್ರ ಸೇರಿದವರಲ್ಲ. ಅಂಬೇಡ್ಕರ್ ಈ ದೇಶದ ಆಸ್ತಿ. ಈ ದೇಶ ಕಂಡ ಅಪ್ರತಿಮ ಚಿಂತಕ. ಆದರೆ ಕಾಲಾನಂತರದಲ್ಲಿ ಅಂಬೇಡ್ಕರ್ ಅವರನ್ನು ಒಂದು ವರ್ಗಕ್ಕೆ ಸೀಮಿತ ಮಾಡಿ ಅವರ ವ್ಯಕ್ತಿತ್ವವನ್ನು ಕುಬ್ಜವಾಗಿಸುವ ತಪ್ಪು ಕೆಲಸ ನಿರಂತರವಾಗಿ ನಡೆಯಿತು. ಮುಖ್ಯವಾಗಿ ಅಂಬೇಡ್ಕರ್ ಓರ್ವ ರಾಷ್ಟ್ರವಾದಿಯಾಗಿದ್ದವರು. ಅದೇ ಕಾರಣಕ್ಕೋಸ್ಕರವೇ ಅಥವಾ ರಾಷ್ಟ್ರೀಯ ಅಸ್ಮಿತೆಯನ್ನು ಕಾಯ್ದುಕೊಳ್ಳಲು ಈ ದೇಶದ ಸಂಸ್ಕೃತಿ ಸೊಗಡನ್ನು ಕಾಪಿಟ್ಟುಕೊಂಡು ಹೋಗಬೇಕೆಂಬುದನ್ನು ಬಲವಾಗಿ ಪ್ರತಿಪಾದನೆ ಮಾಡಿದ್ದರು. ಕಾರಣಾಂತರದಿಂದ ಈ ಸತ್ಯ ಹೊರಬರಗೊಡಲಿಲ್ಲ. ಅದು ಅಂಬೇಡ್ಕರ್ ವ್ಯಕ್ತಿತ್ವಕ್ಕೆ ಮಾಡುವ ಅಪಚಾರವಲ್ಲದೆ ಮತ್ತೇನೂ ಅಲ್ಲ. ಅಂಬೇಡ್ಕರ್ ಅವರು ಈ ದೇಶದ ಇತಿಹಾಸ ಮತ್ತು ಸಂಸ್ಕೃತಿಯ ಜ್ಞಾನ ಮಾತ್ರವಲ್ಲ, ಆ ನಿಟ್ಟಿನಲ್ಲಿ ಜಾಗತಿಕವಾಗಿ ತೌಲನಿಕ ಅಧ್ಯಯನ ಮಾಡಿ ತಿಳಿವಳಿಕೆ ಹೊಂದಿದ್ದರು. ಎಲ್ಲದಕ್ಕಿಂತ ಮುಖ್ಯವಾಗಿ ಅಂಬೇಡ್ಕರ್ ನಿಷ್ಠುರವಾದಿಯಾಗಿದ್ದರು. ಹೀಗಾಗಿ ಅವರು ನೆಹರೂ ಮತ್ತು ನೆಹರೂ ಹಿಡಿತದಲ್ಲಿದ್ದ ಕಾಂಗ್ರೆಸ್ ಪಕ್ಷದ ಒತ್ತಡ, ಅಪವಾದಗಳಿಗೆ ಎಂದೂ ಬಗ್ಗಿರಲಿಲ್ಲ. ಅಂಬೇಡ್ಕರ್ ಅವರನ್ನು ಅರಗಿಸಿಕೊಳ್ಳಲು ಆಗುವುದಿಲ್ಲ ಎಂಬ ಕಾರಣಕ್ಕೋ ಏನೋ ಒಂದು ಹಂತದಲ್ಲಿ ಅಂಬೇಡ್ಕರ್ ಅವರ ಹತ್ಯಾ ಯತ್ನವೂ ನಡೆದು ಹೋಗುತ್ತದೆ. ಈ ಎಲ್ಲ ವಿಷಯಗಳ ಕುರಿತು ಕನ್ನಡದಲ್ಲಿರುವ ಪುಸ್ತಕವಿದು. ಇತಿಹಾಸ, ಸಂಸ್ಕೃತಿ ಆಸಕ್ತರ ಪಾಲಿಗೊಂದು ಸಂಗ್ರಹಯೋಗ್ಯ ಹೊತ್ತಿಗೆ.

ಪುಸ್ತಕಕ್ಕಾಗಿ: 6360581957

ಸಂಪಾದಕೀಯ ಸಹಕಾರ: ಡಾ॥ ಎಂ.ಕೆ. ಶ್ರೀಧರನ್, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ, ಸುಲಕ್ಷಣಾ ಶರ್ಮಾ

## ರೈಲಿನಿಂದ ಬಿದ್ದು ಮೃತಪಟ್ಟರೆ ರೈಲ್ವೆ ಇಲಾಖೆಯಿಂದಲೇ ಪರಿಹಾರ: ಹೈಕೋರ್ಟ್



ಚಲಿಸುತ್ತಿರುವ ರೈಲಿನಿಂದ ಇಳಿಯುವಾಗ ಅಚನಾಕ್ ಆಗಿ ಕೆಳಗೆ ಬಿದ್ದು ಮೃತಪಟ್ಟವರಿಗೆ ರೈಲ್ವೆ ಇಲಾಖೆಯಿಂದಲೇ ಪರಿಹಾರ ನೀಡುವಂತೆ ಕರ್ನಾಟಕ ಉಚ್ಚ ನ್ಯಾಯಾಲಯ ಸೂಚನೆ ನೀಡಿದೆ. ಇತ್ತೀಚೆಗೆ ರಾಮನಗರದ ಜಯಮ್ಮ ಎಂಬ ಮಹಿಳೆ ರೈಲು ಇಳಿಯುವಾಗ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದರು. ಈ ಸಂಬಂಧವಾಗಿ ರೈಲ್ವೆ ಹಕ್ಕುಗಳ ನ್ಯಾಯಮಂಡಳಿ ಹೊರಡಿಸುರುವ ತೀರ್ಪನ್ನು ಪ್ರಶ್ನಿಸಿ, ಚನ್ನಪಟ್ಟಣ ನಿವಾಸಿ ರೋಜಮಣಿ ಹಾಗೂ ಮತ್ತಿತರರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಹೆಚ್.ಪಿ ಸಂದೇಶ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿ ತೀರ್ಪು ನೀಡಿದ್ದಾರೆ.

## ರಾಮಮಂದಿರಕ್ಕೆ ಇದುವರೆಗೆ 1.5 ಕೋಟಿ ಭಕ್ತರು ಭೇಟಿ



ಐತಿಹಾಸಿಕ ಅಯೋಧ್ಯೆ ರಾಮಮಂದಿರದಲ್ಲಿ ರಾಮಲಲಾನ ಪ್ರಾಣಪ್ರತಿಷ್ಠಾಪನೆಗೊಂಡ ನಂತರ ಭಕ್ತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಇದುವರೆಗೆ ಸುಮಾರು 1.5 ಕೋಟಿ ಜನರು ಭೇಟಿ ನೀಡಿದ್ದಾರೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮಾಹಿತಿ ನೀಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿನಿತ್ಯ ಒಂದು ಲಕ್ಷಕ್ಕೂ ಹೆಚ್ಚು ಜನರು ರಾಮಲಲಾನ ದರ್ಶನ ಪಡೆಯಲು ದೇವಾಲಯಕ್ಕೆ ಭೇಟಿ ನೀಡುತ್ತಿದ್ದಾರೆ

# ಸಾಲುದ್ದದ ಸುದ್ದಿಗಳು

## 10.9 ಕೋಟಿ ಸಸಿಗಳನ್ನು ನೆಟ್ಟ ಕಾವೇರಿ ಕಾಲಿಂಗ್ ಚಳುವಳಿ

ಸದ್ಗುರು ಜಗ್ಗಿ ವಾಸುದೇವ್ ಅವರ ನೇತೃತ್ವದಲ್ಲಿ ನಡೆದ ಕಾವೇರಿ ಕಾಲಿಂಗ್ ಆಂದೋಲನವು 10.9 ಕೋಟಿ ಸಸಿಗಳನ್ನು ನೆಡಲು ಕಾರಣವಾಗಿದೆ. ಸುಮಾರು 2,13,000 ರೈತರು ಮರ ಆಧಾರಿತ ಕೃಷಿಗೆ ಪರಿವರ್ತನೆಯನ್ನು ಮಾಡಿಕೊಳ್ಳಲು ಪ್ರಾರಂಭಿಸಿದ್ದಾರೆ. ಆಂದೋಲನವು ಕಾವೇರಿ ನದಿಯನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಹೊಂದಿದೆ. ಖಾಸಗಿ ಕೃಷಿ ಭೂಮಿಗಳಲ್ಲಿ 242 ಕೋಟಿ ಮರಗಳನ್ನು ನೆಡಲು ಅನುವು ಮಾಡಿಕೊಡುವ ಮೂಲಕ ರೈತರ ಆರ್ಥಿಕತೆಯನ್ನು ಗಮನಾರ್ಹವಾಗಿ ಈ ಆಂದೋಲನ ಸುಧಾರಿಸಿದೆ

## ಭಾರತದಲ್ಲಿ ಸ್ಟಾರ್ಟ್‌ಅಪ್‌ಗಳ ಸಂಖ್ಯೆ 300 ಪಟ್ಟು ಹೆಚ್ಚಳ




ನವದೆಹಲಿ: 2014ರಲ್ಲಿ ಕೇವಲ 350 ಇದ್ದ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಪ್ರಸ್ತುತ 100ಕ್ಕೂ ಹೆಚ್ಚು ಯೂನಿಕಾರ್ನ್‌ಗಳ ಜೊತೆಗೆ 90000ಕ್ಕೆ ಏರಿಕೆಯಾಗಿದೆ. ಇದರಿಂದ ಸ್ಟಾರ್ಟಪ್‌ಗಳ ಸಂಖ್ಯೆ 300 ಪಟ್ಟು ಹೆಚ್ಚಾಗಿದೆ. ಪ್ರಸ್ತುತ ದೇಶವು ಜಾಗತಿಕ ಮಟ್ಟದಲ್ಲಿ 3ನೇ ಅತಿದೊಡ್ಡ ಸ್ಟಾರ್ಟಪ್ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಇದರಿಂದ ವೇಗವಾಗಿ ಬೆಳೆಯುತ್ತಿರುವ ಯುನಿಕಾರ್ನ್‌ಗಳಿಗೆ ನೆಲೆಯಾಗಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ, ಮೋದಿಯವರು ಪ್ರಧಾನಿಯಾಗಿ ಈ ದೇಶದ ಯುವಕರಿಗೆ ಉದ್ಯೋಗವನ್ನು ಕೇವಲ ಸರ್ಕಾರಿ ಉದ್ಯೋಗಕ್ಕೆ ಸೀಮಿತಗೊಳಿಸಿಲ್ಲ ಮತ್ತು ಜೀವನೋಪಾಯದ ಹೊಸ ಮಾರ್ಗಗಳನ್ನು ಉತ್ತೇಜಿಸಲು ಶ್ರಮದಾಯಕ ಮತ್ತು ಪ್ರಜ್ಞಾಪೂರ್ವಕ ಪ್ರಯತ್ನವನ್ನು ಮಾಡಿದ್ದಾರೆ ಎಂದರು.

## ಸ್ವದೇಶಿ ಕೋವ್ಯಾಕ್ಸಿನ್ ಸುರಕ್ಷಿತ: ಭಾರತ್ ಬಯೋಟೆಕ್




ಕೋವಿಡ್‌ಗೆ ತಮ್ಮ ಕಂಪನಿ ಅಭಿವೃದ್ಧಿಪಡಿಸಿದ್ದ ಮೊದಲ ಸ್ವದೇಶಿ ಲಸಿಕೆ ಕೋವ್ಯಾಕ್ಸಿನ್ ಸಂಪೂರ್ಣ ಸುರಕ್ಷಿತವಾಗಿದ್ದು, ಅದರಿಂದ ಯಾವುದೇ ಅಡ್ಡ ಅಡ್ಡ ಪರಿಣಾಮ ಕಂಡುಬಂದಿಲ್ಲ. ಲಸಿಕೆ ತಯಾರಿಕೆ ವೇಳೆ ಸುರಕ್ಷತೆ ನಮ್ಮ ಮೊದಲ ಮತ್ತು ಗರಿಷ್ಠ ಆದ್ಯತೆಯಾಗಿತ್ತು. ನಂತರವಷ್ಟೇ ಲಸಿಕೆಯ ಪರಿಣಾಮವಾಗಿತ್ತು. ಹಲವು ಆಯಾಮಗಳಲ್ಲಿ ಪರೀಕ್ಷೆ ನಡೆಸಿದ ಭಾರತದ ಏಕೈಕ ಕೋವಿಡ್ ಲಸಿಕೆಯಾಗಿದ್ದು, 27,000 ಸ್ಯಾಂಪಲ್‌ಗಳ ಮೇಲೆ ಪರೀಕ್ಷೆ ನಡೆಸಲಾಗಿತ್ತು ಎಂದು ಹೈದ್ರಾಬಾದ್ ಮೂಲದ ಭಾರತ್ ಬಯೋಟೆಕ್ ಸಂಸ್ಥೆ ಸ್ಪಷ್ಟಪಡಿಸಿದೆ. ಬ್ರಿಟನ್ ಮೂಲದ ಆಸ್ಟ್ರಾಜೆನಿಕಾ ತಮ್ಮ 'ಕೋವಿಶೀಲ್ಡ್' ಲಸಿಕೆ ರಕ್ತಹೆಪ್ಪುಗಟ್ಟುವಿಕೆ ರೀತಿ ಹಲವು ಅಡ್ಡ ಪರಿಣಾಮ ಬೀರಿತ್ತು ಎಂದು ನ್ಯಾಯಾಲಯದ ಮುಂದೆ ಹೇಳಿದ ಬೆನ್ನಲೇ ಭಾರತ್ ಬಯೋಟೆಕ್ ಈ ಹೇಳಿಕೆ ನೀಡಿದೆ.

## ಮೊದಲ ಮತದಾನ ಮಾಡಿದ ಶೋಂಪೆನ್ ಜನರು



ಗ್ರೇಟ್ ನಿಕೋಬಾರ್ ದ್ವೀಪದ ಶೋಂಪೆನ್ ಬುಡಕಟ್ಟು ಜನಾಂಗದವರು ಮೊದಲ ಬಾರಿಗೆ ಸಾರ್ವತ್ರಿಕ ಚುನಾವಣೆಯಲ್ಲಿ ಮತ ಚಲಾಯಿಸಿದ್ದಾರೆ. ಚುನಾವಣಾ ಆಯೋಗದಿಂದ ಮತದಾನದ ಕುರಿತು ಜಾಗೃತಿ ಕಾರ್ಯಕ್ರಮಗಳು, ಅನೇಕ ಶಿಬಿರಗಳ ಆಯೋಜನೆ ಮತ್ತು ಮತದಾನ ಪಟ್ಟಿಗೆ ಹೆಸರು ನೋಂದಣಿ ಪ್ರಕ್ರಿಯೆ ಮುಂತಾದ ನಿರಂತರ 2 ವರ್ಷಗಳ ಪರಿಶ್ರಮದ ಫಲವಾಗಿ ಇದು ಸಾಧ್ಯವಾಗಿದೆ.

# ಮತಗಟ್ಟೆಯಲ್ಲಿ 100% ಮತದಾನ ಮಾಡಿಸಿದ ಸ್ವೀಪ್ ಸಮಿತಿ

ಜಗತ್ತಿನಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಗುರುತಿಸಿಕೊಂಡ ದೇಶ ನಮ್ಮದು. ಭಾರತೀಯ ಸಂವಿಧಾನದ ಪ್ರಕಾರ ಜನಸಾಮಾನ್ಯನೇ ಅತ್ಯಂತ ಪ್ರಭಾವಶಾಲಿ ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ ನಿರ್ದಿಷ್ಟ ರಾಜಕೀಯ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಬೇಕಾದರೆ ಚುನಾವಣೆಯಲ್ಲಿ ಬಹುಮತವನ್ನು ಗಳಿಸಬೇಕು. ಇಲ್ಲಿ ಜನಾದೇಶಕ್ಕೆ ಒತ್ತು ನೀಡಲಾಗುವುದು. ಹಾಗಾಗಿ ಸಂವಿಧಾನದ ಪ್ರಕಾರ ಮತದಾನ ಎಂಬುದು ಹಕ್ಕು ಮಾತ್ರವಲ್ಲ, ಪ್ರತಿಯೊಬ್ಬ ಮತದಾರನ ಕರ್ತವ್ಯವೂ ಹೌದು.

ಪ್ರತಿ ಬಾರಿಯೂ ಚುನಾವಣೆ ಹತ್ತಿರ ಬರುತ್ತಿದ್ದಂತೆ ಪ್ರತೀ ಬೂತ್‌ಗಳಲ್ಲಿ ಮತದಾನದ ದರ ಹೆಚ್ಚಾಗಬೇಕು ಎಂಬ ದೃಷ್ಟಿಯಿಂದ ಮತದಾನ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗುತ್ತದೆ. ಶೇಕಡಾ ನೂರರಷ್ಟು ಮತದಾನ ನಡೆಯಬೇಕೆಂದು ಚುನಾವಣಾ ಆಯೋಗ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಜಿಲ್ಲಾ ಮತ್ತು ತಾಲೂಕು ಸ್ವೀಪ್ ಸಮಿತಿಯು ಬಾಂಜಾರುಮಲೆ ಊರಿನಲ್ಲಿ ಪ್ರತಿಯೊಬ್ಬ ಮತದಾರನಿಂದಲೂ ಮತದಾನವನ್ನು ಮಾಡಿಸಿ 100% ಮತದಾನದ ಕನಸನ್ನು ನನಸು ಮಾಡಿದೆ.

ಸರಿಯಾದ ರಸ್ತೆ ಮತ್ತು ಸಂಪರ್ಕ ವ್ಯವಸ್ಥೆ ಇಲ್ಲದ ಪುಟ್ಟ ಊರು ಬಾಂಜಾರುಮಲೆ. ಸುಮಾರು 184 ಎಕ್ರೆ ಜಾಗದಲ್ಲಿರುವ 48 ಮನೆಗಳಲ್ಲಿ ಒಟ್ಟು 471 ಮಂದಿ ಮತದಾರರು ಇದ್ದಾರೆ. ಪ್ರತಿ ಬಾರಿಯೂ ಚುನಾವಣೆ ಆದಾಗ ಇಲ್ಲಿ 99% ಕ್ಕಿಂತ ಅಧಿಕ ಮತದಾನವಾಗುವುದು ಸಾಮಾನ್ಯ. 2019ರ ಲೋಕಸಭಾ



ಚುನಾವಣೆಯಲ್ಲಿ ಬಾಂಜಾರುಮಲೆಯಲ್ಲಿ 99.06% ಮತದಾನವಾಗಿತ್ತು. ಹಾಗಾಗಿ ಈ ಸಲ ನೂರಕ್ಕೆ ನೂರು ಮತದಾನವಾಗಬೇಕೆಂದು ಸ್ವೀಪ್ ಸಮಿತಿಯು ಮತಗಟ್ಟೆಯ ಮತದಾರರು ಜೊತೆಗೆ ನಾಲ್ಕು ಸುತ್ತಿನ ಸಂವಾದ ನಡೆಸಿ ಅವರ ಸಮಸ್ಯೆಗಳಿಗೆ ಪರಿಹಾರ ನೀಡುವ ಭರವಸೆ ನೀಡಿ 100% ಮತದಾನವನ್ನು ಮಾಡಿಸಿದ್ದು ಸ್ಫೂರ್ತಿದಾಯಕ. ಒಬ್ಬಿಬ್ಬರಿಂದ ತಪ್ಪಿ ಹೋಗುತ್ತಿದ್ದ 100% ಮತದಾನವನ್ನು ಮತದಾರರ ಬೆನ್ನು ಬಿದ್ದು ಯಶಸ್ವಿಗೊಳಿಸಿದ ಸ್ವೀಪ್ ಸಮಿತಿಯ ಸದಸ್ಯರು ತಮ್ಮ ಕರ್ತವ್ಯ ನಿರ್ವಹಿಸುವುದಲ್ಲದೆ, ಮತದಾರರು ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ಮಾಡಿ 'ಪ್ರಜಾಪ್ರಭುತ್ವಕ್ಕೆ ಜೈ ' ಎಂದಿದ್ದಾರೆ.




# ಭಾರತದ ಉತ್ಪಾದನಾ ವಲಯ ಉಜ್ವಲ

ಮಾರ್ಚ್‌ನಲ್ಲಿ ಭಾರತದ ಉತ್ಪಾದನಾ ವಲಯದ ಚಟುವಟಿಕೆ ಗರಿಷ್ಠ ಮಟ್ಟಕ್ಕೆ ಮುಟ್ಟಿದ್ದು, ಇದು 13 ವರ್ಷಗಳಲ್ಲೇ ದೊಡ್ಡದಾಖಲೆ ಎಂದಿನಿಸಿತ್ತು. ಭಾರತದಲ್ಲಿ ಉತ್ಪಾದನಾ ವಲಯ ಭಾರಿ ಚೇತರಿಕೆ ಕಾಣುತ್ತಿದೆ. ಹೆದ್ದಾರಿಗಳು, ರೈಲ್ವೆ, ವಿದ್ಯುತ್ ಸ್ಥಾವರ, ಹೊಸ ಬಂದರುಗಳ ನಿರ್ಮಾಣ ಸೇರಿದಂತೆ ಮೂಲ ಸೌಕರ್ಯ ಯೋಜನೆಗಳಿಗೆ ಸರಕಾರ ಹೆಚ್ಚು ವೆಚ್ಚ ಮಾಡುತ್ತಿದೆ. ಇದರಿಂದ ಇಡೀ ವಿಶ್ವದಲ್ಲೇ ಭಾರತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ಇದು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಿದೆ. ಆದಾಯವನ್ನು ದ್ವಿಗುಣಗೊಳಿಸಿದೆ. ಇದು ಸರಕು ಮತ್ತು ಸೇವೆಗಳಲ್ಲಿ ದೇಶೀಯ ಬೇಡಿಕೆಯನ್ನು ಹೆಚ್ಚಿಸಿದೆ ಎಂದು ಎಚ್ ಎಸ್ ಬಿ ಸಿ ಸಮೀಕ್ಷಾ ವರದಿಯಲ್ಲಿ ಹೇಳಲಾಗಿದೆ.

ಕಳೆದ ತಿಂಗಳು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಬಿಡುಗಡೆ ಮಾಡಿದ ವರದಿಯಲ್ಲಿ – ಈ ಹಣಕಾಸು ವರ್ಷದಲ್ಲಿ(2024–25) ಭಾರತದ ಬೆಳವಣಿಗೆ ದರ ವೃದ್ಧಿಯಾಗಲಿದೆ ಎಂದು ಹೇಳಿತ್ತು. ರಿಯಲ್ ಎಸ್ಟೇಟ್ ಕ್ಷೇತ್ರದ ಕುಸಿತ ಹಾಗೂ ಅಮೆರಿಕಾ ಹೇರಿದ ನಿರ್ಬಂಧಗಳಿಂದ ಚೀನಾ ಹಿಂದೆ ಬಿದ್ದಿದೆ. ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳು ವ್ಯಾಪಾರ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ ಮತ್ತು ಜಾಗತಿಕ ಬೆಳವಣಿಗೆಯನ್ನು ಮುಂಚೂಣಿಗೆ ತರುತ್ತವೆ. ಐಎಂಎಫ್ ವರದಿಯು ಭಾರತದ ಆರ್ಥಿಕ ನೀತಿಯನ್ನು ಸಮರ್ಥಿಸುತ್ತದೆ, ಏಕೆಂದರೆ ಮೂಲಸೌಕರ್ಯ ಯೋಜನೆಗಳಿಗೆ ಸರಕಾರ ಹೆಚ್ಚು ವೆಚ್ಚ ಮಾಡುತ್ತಿದೆ. ಇದರಿಂದ ದೇಶೀಯ ಬೇಡಿಕೆ ಹೆಚ್ಚಿದೆ. ಬೆಳವಣಿಗೆ ದರ ಅಧಿಕವಾಗಿದೆ. ಮುಂದಿನ 12 ತಿಂಗಳಲ್ಲಿ ಬೇಡಿಕೆ ಇನ್ನಷ್ಟು ಗರಿಗೆದರಲಿದೆ. ಇದಕ್ಕಾಗಿ ಹೆಚ್ಚು ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕಾರ್ಮಿಕ ವೆಚ್ಚ ಕೂಡ ಹೆಚ್ಚಿದೆ. ಬೇರೆಬೇರೆ ಸಂಸ್ಥೆಗಳಿಂದ ಬೇಡಿಕೆ ಹೆಚ್ಚಿದರೆ ಉತ್ಪಾದನಾ ವಲಯದ ಮೂಲ ವಸ್ತುಗಳಿಗೆ ಭಾರಿ ಉತ್ತೇಜನ ಸಿಗುತ್ತದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th MAY 2024

REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2024-2026 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-05-2024



## ಮೀಸಲಾತಿಗೆ ಆರ್‌ಎಸ್‌ಎಸ್ ಸದಾ ಬೆಂಬಲ: ಡಾ. ಮೋಹನ್ ಭಾಗವತ್



**ಹೈದರಾಬಾದ್:** ಸಂವಿಧಾನದ ಆಶಯದಂತೆ ನೀಡಲಾಗುತ್ತಿರುವ ಮೀಸಲಾತಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಎಂದಿಗೂ ವಿರೋಧಿಸಿಲ್ಲ, ಅದಕ್ಕೆ ಸಂಪೂರ್ಣ ಬೆಂಬಲವನ್ನು ನೀಡಿದ್ದೇವೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಹೇಳಿದರು.

ವಿದ್ಯಾಭಾರತಿಯ ವತಿಯಿಂದ ನಡೆಯುತ್ತಿರುವ ವಿದ್ಯಾಭಾರತಿ ವಿಜ್ಞಾನಂ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮೀಸಲಾತಿಯನ್ನು ಆರ್‌ಎಸ್‌ಎಸ್ ವಿರೋಧಿಸುತ್ತದೆ ಎಂದು ತಪ್ಪು ಅರ್ಥ ಬರುವ ಸುಳ್ಳು ವೀಡಿಯೋ ತುಣುಕು ಕೆಲವು ದಿನಗಳಿಂದ ಹರಿದಾಡುತ್ತಿದೆ. ಅದು ತಪ್ಪು ಮಾಹಿತಿ. ಸಂವಿಧಾನದ ಆಶಯದಂತೆ ಮೀಸಲಾತಿ ಜಾರಿಗೆ ಬಂದಾಗಿನಿಂದ ಅದಕ್ಕೆ ಆರ್ ಎಸ್ ಎಸ್ ಬೆಂಬಲ ಸೂಚಿಸುತ್ತಾ ಬಂದಿದೆ. ಮೀಸಲಾತಿಯ ಅಗತ್ಯವಿರುವವರೆಗೂ ಅದನ್ನು ಮುಂದುವರಿಸಬೇಕು ಎನ್ನುವುದು ಸಂಘದ ಅಭಿಪ್ರಾಯವಾಗಿದೆ. ಸಮಾಜದಲ್ಲಿ ಸಾಮಾಜಿಕ ಬೇಧಭಾವ ಇರುವವರೆಗೂ ಮೀಸಲಾತಿಗಳು ಇರಬೇಕು ಎಂದರು.

ಆರ್‌ಎಸ್‌ಎಸ್ ಕಳೆದ 99 ವರ್ಷಗಳಿಂದ ಸಮಾಜದಲ್ಲಿ ಅಸ್ಪೃಶ್ಯತೆ ನಿವಾರಿಸುವ ನಿಟ್ಟಿನಲ್ಲಿ ನಿರಂತರ ಜಾಗೃತಿ, ಅರಿವು ಮೂಡಿಸುವ ಕೆಲಸವನ್ನು ಬದ್ಧತೆಯಿಂದ ಮಾಡುತ್ತಿದೆ ಎಂದರು.

## ಸೀತಾ ಮಾತೆಯ ದೇವಾಲಯ ಪ್ರತಿಷ್ಠಾಪನೆಗೆ ಸರಯೂ ನದಿ ನೀರು



**ಅಯೋಧ್ಯೆ:** ಸೀತಾ ಮಾತೆಯ ದೇವಾಲಯದ ಪ್ರತಿಷ್ಠಾಪನೆ ಸಮಾರಂಭಕ್ಕಾಗಿ ಭಾರತವು ಶ್ರೀಲಂಕಾಕ್ಕೆ ಪವಿತ್ರ ಸರಯೂ ನದಿ ನೀರನ್ನು ಕಳುಹಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಸೀತಾ ಮಾತೆಯ ದೇವಾಲಯದ ಪ್ರತಿಷ್ಠಾಪನೆ ಮೇ 19 ರಂದು ನಡೆಯಲಿದೆ. ಶ್ರೀಲಂಕಾದ ಪ್ರತಿನಿಧಿಗಳು ಉತ್ತರ ಪ್ರದೇಶ ಸರ್ಕಾರಕ್ಕೆ ಬರೆದ ಪತ್ರದ ನಂತರ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ದೇವಾಲಯದಲ್ಲಿ ಸೀತಾ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಜರುಗಲಿರುವ ಧಾರ್ಮಿಕ ಸಮಾರಂಭಗಳಿಗೆ ಸರಯೂ ನದಿ ನೀರು ಬಳಕೆಯಾಗಲಿದೆ.

## ಹಿಂದೂ ಸಂಪ್ರದಾಯದಂತೆ ನಡೆಯದ ಮದುವೆ ಅಸಿಂಧು: ಸುಪ್ರೀಂಕೋರ್ಟ್


ಹಿಂದೂ ಸಂಪ್ರದಾಯದಂತೆ ನಡೆಯುವ ವಿವಾಹವು ಒಂದು ಪವಿತ್ರ ಸಂಸ್ಕಾರವೇ ಹೊರತು, ಹಾಡು, ನೃತ್ಯ, ಭೋಜನಕ್ಕೆ ಮಾತ್ರ ಸೀಮಿತವಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಹಿಂದೂ ವಿವಾಹ ಕಾಯ್ದೆಯಡಿ ಸೂಚಿಸಲಾದ ಸಾಂಪ್ರದಾಯಿಕ ಆಚರಣೆಗಳು



ಮತ್ತು ಸಮಾರಂಭಗಳು ಶ್ರದ್ಧೆಯಿಂದ, ಕಟ್ಟುನಿಟ್ಟಾಗಿ ಮತ್ತು ಧಾರ್ಮಿಕವಾಗಿರಬೇಕು ಎಂದು ಹೇಳಿದೆ. ಅಗತ್ಯವಿರುವ ಆಚರಣೆಗಳನ್ನು ಕೈಗೊಳ್ಳದೆ ಇದ್ದಾಗ, ಪ್ರಾಧಿಕಾರವೊಂದು ಮದುವೆಯ ಪ್ರಮಾಣಪತ್ರ ನೀಡಿದೆ ಎಂದಮಾತ್ರಕ್ಕೆ, ಮದುವೆ ಆಗಿದೆ ಎನ್ನಲಾಗದು ಎಂದು ಪೀಠವು ಸ್ಪಷ್ಟಪಡಿಸಿದೆ. ಒಂದು ವೇಳೆ ಇವುಗಳನ್ನು ಅನುಸರಿಸಲು ವಿಫಲವಾದರೆ ಆ ಮದುವೆಯನ್ನು ನೋಂದಾಯಿಸಿದ ನಂತರವೂ ಅಮಾನ್ಯವೆಂದು ಘೋಷಿಸಲಾಗುತ್ತದೆ ಎಂದು ಸುಪ್ರೀಂಕೋರ್ಟ್ ತಿಳಿಸಿದೆ. ಈ ಬಗ್ಗೆ ಕಾಯಿದೆಯ ಸೆಕ್ಷನ್ 7 'ಹಿಂದೂ ವಿವಾಹದ ಆಚರಣೆ'ಗಳ ಬಗ್ಗೆ ಹೇಳುತ್ತದೆ. ಮದುವೆಯ ಸಿಂಧುತ್ವಕ್ಕಾಗಿ ಅದನ್ನು ಅನುಸರಿಸಬೇಕು. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಬಿವಿ ನಾಗರತ್ನ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠವು ಈ ಆದೇಶವನ್ನು ನೀಡಿದೆ.

## ಅಯೋಧ್ಯೆಗೆ ಭೇಟಿ ನೀಡಿ ರಾಮಲಲಾನ ದರ್ಶನ ಪಡೆದ ಪಾಕಿಸ್ತಾನದ 200 ಹಿಂದೂಗಳು

ಪಾಕಿಸ್ತಾನದ 200 ಹಿಂದೂಗಳು ಅಯೋಧ್ಯೆಗೆ ಭೇಟಿ ನೀಡಿ ರಾಮಲಲಾ ದರ್ಶನವನ್ನು ಪಡೆದರು. ರಾಮಲಲಾನ ದರ್ಶನವನ್ನು ಪಡೆಯಲು ಪಾಕಿಸ್ತಾನದಿಂದ 200 ಸಿಂಧಿ ಸಮುದಾಯದ ಸದಸ್ಯರ ನಿಯೋಗ ಅಯೋಧ್ಯೆಗೆ ಆಗಮಿಸಿ ರಾಮಲಲಾನ ದರ್ಶನ ಪಡೆದರು ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಅಧಿಕಾರಿಗಳು ತಿಳಿಸಿದರು.



## ಬರದಲ್ಲೂ ಕೃಷಿ ವಿವಿಯ 30 ಕೊಳವೆ ಬಾವಿಯಲ್ಲಿ ನೀರು!

ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಬೇಸಿಗೆಯಲ್ಲಿ ನೀರಿಗೆ ಹಾಹಾಕಾರ ಉಂಟಾದರೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಮಾತ್ರ ಇದಕ್ಕೆ ಅಪವಾದದಂತಿದೆ. ವೈಜ್ಞಾನಿಕವಾಗಿ ಹಲವು ರೀತಿಯಲ್ಲಿ ಮಳೆ ನೀರು ಕೊಯ್ಲು ಅನುಸರಿಸಿದ್ದೇ ಇದಕ್ಕೆ ಕಾರಣ.




ವಿವಿಯ ಮಳೆ ನೀರು ಕೊಯ್ಲು ವಿಧಾನದಿಂದ ಶೇಖರಣೆಯಾದ ನೀರನ್ನು ಕಚೇರಿ ಮತ್ತು ಸಂಶೋಧನಾ ತಾಕುಗಳಿಗೆ ಉಪಯೋಗಿಸಲಾಗುತ್ತಿದೆ. ಜಿಕೆವಿಕೆ ಕ್ಯಾಂಪಸ್‌ನಲ್ಲಿ ಸುಮಾರು 30 ಕೊಳವೆ ಬಾವಿಗಳಿದ್ದು, ಜಲ ಮರು ಪೂರಣದಿಂದಾಗಿ ಬರಗಾಲದಲ್ಲೂ ಕೊಳವೆಬಾವಿ ವಿಫಲವಾಗಿಲ್ಲ ಎಂಬುದು ಗಮನಾರ್ಹ ಸಂಗತಿ.

'ಬೆಂಗಳೂರು ಜಾಗತಿಕವಾಗಿ ಗುರುತಿಸಿಕೊಂಡಿರುವ ಮಹಾನಗರ. ಇಲ್ಲಿ ಶೇ.78ರಷ್ಟು ಭೂಭಾಗ ಕಟ್ಟಡ, ರಸ್ತೆ, ಕಾಲುದಾರಿಗಳಿಂದ ಆವರಿಸಲ್ಪಟ್ಟಿದೆ. ಉಳಿದ ಭಾಗ ಮಣ್ಣಿನಿಂದ ಕೂಡಿದೆ. ಮಳೆ ನೀರಿನ ಶೇ.70 ರಿಂದ 75 ರಷ್ಟು ಪ್ರಮಾಣ ಒಳ ಚರಂಡಿ ಸೇರಿದರೆ, ಶೇ.15 ರಿಂದ 20 ಭೂಮಿಯಲ್ಲಿ ಇಂಗುತ್ತದೆ. ಉಳಿದ 5 ರಿಂದ 10 ಭಾಗ ಆವಿಯಾಗುತ್ತದೆ. 30/40 ಅಡಿ ಮನೆಯ ಚಾವಣಿಯಲ್ಲಿ ಮಳೆ ನೀರು ಕೊಯ್ಲು ಮಾಡಿದರೆ 4 ಜನರಿರುವ ಕುಟುಂಬಕ್ಕೆ 6 ತಿಂಗಳಿಗಾಗುವಷ್ಟು ನೀರು ಸಿಗುತ್ತದೆ. ಮಳೆನೀರನ್ನು ಸಮರ್ಥವಾಗಿ ಬಳಸಿದರೆ ಬೃಹತ್ ಬೆಂಗಳೂರನ್ನು ಕಾಡುವ ನೀರಿನ ಸಮಸ್ಯೆಯನ್ನು ಹೊಡೆದೊಡಿಸಬಹುದು.

ಬೆಂಗಳೂರಿನಲ್ಲಿ ಪ್ರತಿ ವರ್ಷ ಸರಾಸರಿ 970 ಮಿ.ಮೀ. ಮಳೆಯಾಗುತ್ತದೆ. ಇದರಲ್ಲಿ ಏಪ್ರಿಲ್‌ನಿಂದ ನವೆಂಬರ್‌ವರೆಗೂ 8 ತಿಂಗಳಲ್ಲಿ 880 ಮಿ.ಮೀ. ಮಳೆ ಬರುತ್ತದೆ. ಬೆಂಗಳೂರಿನ ಒಟ್ಟು ಭೌಗೋಳಿಕ ವಿಸ್ತೀರ್ಣ 2190 ಚದರ ಕಿ.ಮೀ.ಗಳಾಗಿದು ಪ್ರತಿ ವರ್ಷ ಸುಮಾರು 20,80,500 ಮಿಲಿಯನ್ ಲೀಟರ್ (5700 ಎಂಎಲ್‌ಡಿ) ಮಳೆಯಾಗುತ್ತದೆ. ನಗರದಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು 2100 ಎಂಎಲ್‌ಡಿ ನೀರಿನ ಅಗತ್ಯವಿದೆ. ಆದ್ದರಿಂದ ಸರಿಯಾದ ರೀತಿಯಲ್ಲಿ ಮಳೆ ನೀರು ಕೊಯ್ಲು ಮಾಡಿದರೆ ಬೆಂಗಳೂರಿನ ನೀರಿನ ಸಮಸ್ಯೆ ನೀಗುತ್ತದೆ ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಮಣ್ಣು ಮತ್ತು ನೀರು ಸಂರಕ್ಷಣಾ ಅಭಿಯಂತರ ಡಾ॥ ಕೆ. ದೇವರಾಜ್ ಅಭಿಪ್ರಾಯಪಟ್ಟಿದ್ದಾರೆ.

## ಪಾಕಿಸ್ತಾನಿ ನೌಕೆಯಿಂದ ₹600 ಕೋಟಿ ಡ್ರಗ್ಸ್ ವಶ

ಭಾರತದ ವಿರುದ್ಧ ನೇರವಾಗಿ ಯುದ್ಧ ಮಾಡಲಾಗದ ಪಾಕಿಸ್ತಾನ ನಾರ್ಕೋ ಟೆರರಿಸಂನಂಥ (ಮಾದಕ ಭಯೋತ್ಪಾದನೆ) ಹೇಡಿ ಕೃತ್ಯಕ್ಕೆ ಮುಂದಾಗಿರುವುದಕ್ಕೆ ಮತ್ತೊಮ್ಮೆ ಆಧಾರ ಸಿಕ್ಕಿದೆ. ಗುಜರಾತ್ ಕರಾವಳಿಯಾಚೆ ಕರಾವಳಿ ಕಾವಲು ಪಡೆ (ಐಸಿಜಿ) ಸಿಬ್ಬಂದಿ ಪಾಕಿಸ್ತಾನಿ ನೌಕೆಯೊಂದರಿಂದ 600 ಕೋಟಿ ರೂ. ಮೌಲ್ಯದ 86 ಕೆಜಿ ಮಾದಕ ವಸ್ತು ವಶಪಡಿಸಿಕೊಂಡಿದ್ದಾರೆ. ಜತೆಗೆ ನೌಕೆಯ 14 ಸಿಬ್ಬಂದಿಯನ್ನು ಬಂಧಿಸಿದ್ದಾರೆ.




ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.